**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**

**ದಕ್ಷಿಣ ಕನ್ನಡ, ಮಂಗಳೂರು**

**ಸೇಷನ್ಸ್ ಕೇಸ್ ನಂಬ್ರ 158/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಂದರ್ | ಚಾಸಾಃ 14 |
| ತಂದೆಯ ಹೆಸರು | : | ಎಂ. ರಾಮಣ್ಣ ಆಚಾರ್ | ಪ್ರಾಸಾಃ 06 |
| ಪ್ರಾಯ | : | 66 ವರ್ಷ | ದಿನಾಂಕಃ 04.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ, ಪೊಲೀಸ್ ಉಪ ನಿರೀಕ್ಷಕರು | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು 1992 ರಿಂದ 2000 ರವರೆಗೆ ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 13.03.1995 ರಂದು ಠಾಣೆಯಲ್ಲಿ ವರದಿಯಾಗಿದ್ದ ಠಾಣಾ ಮೊಕದ್ದಮೆ ಸಂ.28/1995 ರಲ್ಲಿ ನಾರಾಯಣ ಕೆ. ಎಂಬುವವರ ಶವವನ್ನು ಘಟನ ಸ್ಥಳದಿಂದ ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮರಣೋತ್ತರ ಪರೀಕ್ಷೆಗಾಗಿ ಮಧ್ಯಾಹ್ನ 2.30 ಗಂಟೆಗೆ ಚಾಸಾ-18 ರವರ ನಿರ್ದೇಶದ ಮೇರೆಗೆ ತೆಗೆದುಕೊಂಡು ಹೋಗಿ ಅಲ್ಲಿಯ ವೈದ್ಯಾಧಿಕಾರಿಯಾದ ಪ್ರಾಸಾ-4 ರವರ ಮುಂದೆ ಹಾಜರುಪಡಿಸಿ ಮನವಿಯನ್ನು ಸಲ್ಲಿಸಿರುತ್ತೇನೆ.

3. ಪ್ರಾಸಾ-4 ರವರು ಮರಣೋತ್ತರ ಪರೀಕ್ಷೆಯನ್ನು ಮುಗಿಸಿ ಮೃತ ದೇಹವನ್ನು ಅದೇ ದಿನ ಸಂಜೆ 5.30 ಗಂಟೆಗೆ ನನ್ನ ವಶಕ್ಕೆ ಕೊಟ್ಟಿರುತ್ತಾರೆ. ನಂತರ ಶವವನ್ನು ಮೃತನ ಮಗನಾದ ಪ್ರಾಸಾ-1 ರವರಿಗೆ ಹಸ್ತಾಂತರಿಸಿ ರಶೀದಿಯನ್ನು ಪಡೆದುಕೊಂಡಿರುತ್ತೇನೆ.

SC No.158/2024
CW-14 PW- 06

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಡಿ.ಎಸ್./ ಎಲ್.ಎ.ಡಿ.ಸಿ. ವಕೀಲರಿಂದಃ</u>**

ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆಃ</u>** ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.